ಬಯಕೆಯಿತ್ತು. ತಾವು ಒಪ್ಪಿಗೆಯನ್ನು ಕಳಿಸಿದರೆ ಮಾತ್ರ ಹುಡುಗ– ಹುಡುಗಿಯ ಗಣ, ನಕ್ಷತ್ರಗಳ ತಾಳೆ ನೋಡಿಸುವುದಾಗಿ ಭಜನ್ ಲಾಲ್ ಪುರಾನೇವಾಲೆಯು ಅಹಲ್ಯಾ ರಾಣಿಗೆ ಹೇಳಿದ್ದ ವಿಷಯವನ್ನು ಮುಂಬಯಿಗೆ ಬಂದ ಮಾರನೆಯ ದಿನವೇ ಅತ್ತೆ, ಮಾವನ ಕಿವಿಗೆ ಹಾಕಿದ್ದಳು. ಸಾಯಿಪ್ರಭೆಯ ಜನ್ಮ ದಿನಾಂಕದೊಂದಿಗೆ ಎಲ್ಲಾ ವಿವರಗಳನ್ನೂ ಭಜನ್ ಲಾಲನ ಹೆಂಡತಿ ಅಹಲ್ಯಾ ರಾಣಿಯ ಕೈಗೆ ಕೊಟ್ಟಿದ್ದಳು. ಹುಡುಗ ಹುಡುಗಿಯ ಹೆಸರು ಬಲಗಳನ್ನು ಮೊದಲು ನೋಡಿಸುವುದೋ ಇಲ್ಲ ಹುಡುಗ ಹುಡುಗಿಯ ಅಭಿಪ್ರಾಯಗಳನ್ನು ತಿಳಿದುಕೊಂಡ ನಂತರ ನೋಡಿಸುವುದೋ ಎಂಬ ಗೊಂದಲಕ್ಕೆ ಬಿದ್ದ ಗುನ್ನಾಲಾಲ್ ಹುಡುಗ ಹುಡುಗಿಯ ಅಭಿಪ್ರಾಯ ನಂತರ ಕೇಳಿದರಾಯಿತೆಂದು ಹೆಸರು ಬಲಗಳನ್ನು ಕುಟುಂಬದಲ್ಲಿ ಯಾರಿಗೂ ಹೇಳದೆ ಮೊದಲು ತಾನು ತಿಳಿದುಕೊಳ್ಳಬೇಕೆಂದು ನಿರ್ಧರಿಸಿದ. ಈ ವಿಷಯವನ್ನು ಮಾಮೂಲಿಯಾಗಿ ತನ್ನ ಪಿಎ ಹರ್ಷವರ್ಧನ್ ಶಿರೋಡ್ಕರನ ಹತ್ತಿರ ಪ್ರಸ್ತಾಪಿಸಿ ಒಳ್ಳೆಯ ಜ್ಯೋತಿಷಿಯನ್ನು ತಲಾಶು ಮಾಡುವಂತೆ ತಿಳಿಸಿದ್ದ. ಸೈಕಾಲಜಿಯನ್ನು ಅಧ್ಯಯನ ಮಾಡಿರುವ ಶಿರೋಡ್ಕರನಿಗೆ ಮದುವೆ ಸೆಟ್ ಮಾಡಲು ಗಂಡು ಹೆಣ್ಣುಗಳ ಕಡೆಯವರು ಕೇಳುವ ಹೆಸರು ಬಲಗಳ ಹಾಗೂ ರಾಶಿ ಫಲಗಳ ಮೇಲೆ ಅಂಥ ನಂಬಿಕೆಯೇನೂ ಇರಲಿಲ್ಲ. ಅವನ ಕಣ್ಣೆದುರೇ ಅವನ ಅನೇಕ ಬಂಧು ಕುಟುಂಬಸ್ಥರ ಮನೆಗಳಲ್ಲಿ ಜ್ಯೋತಿಷಿಗಳು ಹೇಳಿದಂತೆ ಮಾಡಿದ್ದ ಅನೇಕ ಮದುವೆಗಳು ಕೆಲವೇ ದಿನಗಳಲ್ಲಿ ಮುರಿದುಬಿದ್ದಿದ್ದವು.

ಜ್ಯೋತಿಷ್ಯ ಶಾಸ್ತ್ರ ಕೂಡ ಒಂದು ಮೈಂಡ್ ಗೇಮ್ ಎನ್ನುವುದು ಶಿರೋಡ್ಕರನಿಗೆ ತಿಳಿದಿತ್ತು. ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ಹೊಂದಾಣಿಕೆಗಳು ಮಾತ್ರ ಮದುವೆಯಾದ ನಂತರ ಹೆಣ್ಣು ಮತ್ತು ಗಂಡಿನ ನಡುವೆ ಸಂಬಂಧಗಳನ್ನು ಬಹಳ ಕಾಲ ಗಟ್ಟಿಗೊಳಿಸುವಂತೆ ಮಾಡಬಲ್ಲವೆಂಬ ಸತ್ಯ ಮಾತ್ರ ನಿಜವಾದದ್ದೆಂಬ ಅರಿವು ಸುತ್ತಮುತ್ತಲಿನ ಕುಟುಂಬಗಳನ್ನು ನೋಡಿ ಬಂದಿತ್ತು ಶಿರೋಡ್ಕರನಿಗೆ. ಆದರೂ ತನ್ನ ಕಂಪನಿಯ ಯಜಮಾನ ತನ್ನ ಮೇಲಿಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುವುದು ಸದ್ಯದ ಅವನ ಆದ್ಯತೆಯಾಗಿತ್ತು. ಶಿರೋಡ್ಕರ್ ಮಾರನೆಯ ದಿನ ಬೆಳಗ್ಗೆ ಗುನ್ನಾಲಾಲನ ಮುಂದೆ ನಗುತ್ತಾ ನಿಂತು, 'ಚಾಚ, ಮುಂಬಯಿಯಲ್ಲಿ ನೂರಾರು ಜನ ಜ್ಯೋತಿಷಿಗಳಿದ್ದಾರೆ. ನಮ್ಮ ಕಂಪನಿಗೆ ಅರ್ಧ ಕಿಲೋಮೀಟರ್ ದೂರದಲ್ಲೇ ಅಮ್ರೋಹಿ ಮಜುಂದಾರ್ ಅಂತ ಬಂಗಾಳಿ ಜ್ಯೋತಿಷಿಯೊಬ್ಬರಿದ್ದಾರೆ. ಕೋಲ್ಕತ್ತದಿಂದ ಆರು ವರ್ಷಗಳ ಹಿಂದೆ ಬರಿ ಶರಟು ಪಂಚೆಯಲ್ಲಿ ಇಲ್ಲಿಗೆ ಬಂದಿದ್ದಂತೆ. ಇವತ್ತು ದಿನಕ್ಕೆ ಮೂವತ್ತು ಸಾವಿರಕ್ಕೆ ಕಡಿಮೆಯಿಲ್ಲದೆ ದುಡಿಯುತ್ತಾನಂತೆ. ಆದರೆ ಸ್ವಲ್ಪ ಬಾಯಿಬುಡುಕನಂತೆ. ಸ್ವಲ್ಪ ಲೆವೆಲ್ ಇದ್ದವರಿಗೆ ಜ್ಯೋತಿಷ್ಯ ಹೇಳಿದ ಕೂಡಲೇ ತನ್ನ ಇನ್‌ಸ್ಟಾಗ್ರಾಂನಲ್ಲಿ ಪಬ್ಲಿಸಿಟಿ ಕೊಡ್ತಾನಂತೆ. ಇಬ್ಬರು ಮೂವರು ಬಂದು ಆ ಬಗ್ಗೆ ತಕರಾರು ತೆಗೆದು ಹೋಗಿದ್ದಾರಂತೆ. ಆದರೆ ಮುಂಬಯಿಯಲ್ಲಿ ತುಂಬಾ ಖ್ಯಾತಿ ಪಡೆದಿರೋ ಜ್ಯೋತಿಷಿಗಳು ಮೂವರು ಇದ್ದಾರೆ. ತಾವು ಜ್ಯೋತಿಷ್ಯ ಹೇಳಿದವರ ವಿವರಗಳನ್ನು ತುಂಬಾ ಕಾನ್ಫಿಡೆನ್ಷಿಯಲ್ ಆಗಿ ಇಡ್ತಾರಂತೆ.

ರಮೇಶ್ ಬಾಯ್ ಓಝಾ ಅಂಬಾನಿ ಕುಟುಂಬದ ನಂಬಿಕೆಯ ಜ್ಯೋತಿಷಿ. ಹಾಗೆ ನೋಡಿದರೆ ನೀತಾ ಅಂಬಾನಿ ಮೇಡಮ್ ಬೆಂಗಳೂರಿನಿಂದ ಪ್ರಸಿದ್ಧ ಪಂಡಿತರಾದ ಚಂದ್ರಶೇಖರ್ ಶರ್ಮಾರ ಕೈಯಲ್ಲಿಯೇ ಅಂಟಿಲಿಯಾದಲ್ಲಿ ನಡೆಯುವ ಎಲ್ಲಾ ಶುಭಕಾರ್ಯಗಳನ್ನು ಮಾಡಿಸುವುದು. ಇನ್ನು ಸಂದೀಪ್ ಕೊಚಾರ್ ಸಿನಿಮಾ ರಂಗದ ಸೆಲೆಬ್ರಿಟಿಗಳ ನೆಚ್ಚಿನ ಜ್ಯೋತಿಷಿ. ಸಲ್ಮಾನ್ ಖಾನ್ ರೆಗ್ಯುಲರ್ ಆಗಿ ಭವಿಷ್ಯವನ್ನು ಕೇಳುವುದು ಸಂದೀಪ್ ಕೊಚಾರ್ ಬಳಿಯೇ. ಮುಂದೆ ನಡೆಯುವ ಅನೇಕ ಸಂಗತಿಗಳನ್ನು ಸಲ್ಮಾನ್ ಖಾನನಿಗೆ ಮೊದಲೇ ತಿಳಿಸಿ ಕೊಚಾರ್ ಅನೇಕ ಸಂಕಷ್ಟಗಳಿಂದ ಖಾನನನ್ನು ಪಾರುಮಾಡಿರುವನಂತೆ. ಇನ್ನು ಮುಂಬಯಿಯ ಬಹುತೇಕ ರಾಜಕಾರಣಿಗಳು ಭವಿಷ್ಯವನ್ನು ಕೇಳಲು ಅಜಯ್ ಬಾಂಬಿಯನ್ನು ಮೊರೆ ಹೋಗುತ್ತಾರೆ. ಅಜಯ್ ಬಾಂಬಿ ಸಂಖ್ಯೆಗಳನ್ನು ಹಿಡಿದು ಭವಿಷ್ಯ ನುಡಿಯುತ್ತಾನಂತೆ. ಅವನ ಮಾತನ್ನು ನಂಬಿ ಕೆಲವರು ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ ಕಟ್ಟಿ ಕೋಟ್ಯಂತರ ರೂಪಾಯಿ ಕಳೆದುಕೊಂಡ ಗುಲ್ಲು ಎದ್ದಿತ್ತು. ಇವರಲ್ಲಿ ನಿಮಗೆ ಇಷ್ಟವಾದವರು ಯಾರೆಂದು ತಿಳಿಸಿದರೆ ಅವರ ಭೇಟಿಗೆ ಅರೆಂಜ್ ಮಾಡ್ತೀನಿ ಚಾಚಾ' ಎಂದು ಸುದೀರ್ಘವಾದ ಮಾಹಿತಿ ನೀಡುವುದರೊಂದಿಗೆ ಮಾತು ಮುಗಿಸಿ ಗುನ್ನಾಲಾಲನ ಉತ್ತರಕ್ಕೆ ಕಾದ.

ಗುನ್ನಾಲಾಲ್ ಸ್ವಲ್ಪವೂ ಯೋಚನೆ ಮಾಡದೆ 'ಶಿರೋಡ್ಕರ್, ಸಂದೀಪ್ ಕೊಚಾರ್ ಇರಲಿ. ಕೊಚಾರರನ್ನು ಇಲ್ಲಿಗೆ ಕರೆಸುವುದು ಬೇಡ. ನಾವೇ ಅವರಲ್ಲಿಗೆ ಹೋಗೋಣ. ಏಕೆಂದರೆ, ಈ ವಿಷಯ ನಮ್ಮಿಬ್ಬರಲ್ಲಿಯೇ ಇರಬೇಕು. ಮತ್ತು ಶುಕ್ರವಾರದಂದೇ ಅವರನ್ನು ಭೇಟಿ ಮಾಡಲು ಏರ್ಪಾಡು ಮಾಡು, ಹತ್ತದಿನೈದು ಸಾವಿರ ಜಾಸ್ತಿಯಾದರೂ ಪರವಾಗಿಲ್ಲ' ಎಂದು ಗುನ್ನಾಲಾಲ್ ಸಮಾಧಾನಚಿತ್ತನಾಗಿ ಶಿರೋಡ್ಕರನಿಗೆ ಹೇಳಿದ್ದ. ಗುನ್ನಾಲಾಲ್ ಮೊದಲಿಂದಲೂ ಕಂಪನಿಯಲ್ಲಾಗಲೀ, ಮನೆಯಲ್ಲಾಗಲೀ ಶುಭಕಾರ್ಯಗಳನ್ನು ಮಾಡಬೇಕಾದರೆ ಶುಕ್ರವಾರದ ದಿನವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದ. ಗುನ್ನಾಲಾಲ್ ತನ್ನ ಮೊದಲ ವ್ಯಾಪಾರವನ್ನು ಪ್ರಾರಂಭಿಸಿದ್ದೇ ಶುಕ್ರವಾರದಂದು. ದೇವಸ್ಥಾನಗಳಿಗೆ ಭೇಟಿ ಕೊಡುವುದು, ದಾನ ಧರ್ಮಗಳನ್ನು ಮಾಡುವುದು ಕೂಡ ಶುಕ್ರವಾರದಂದೇ. ಇನ್ನೂ ಹೇಳಬೇಕೆಂದರೆ ಗುನ್ನಾಲಾಲ್ ತಾನು ಮದುವೆಯಾದದ್ದು ಮತ್ತು ಮಗ ಭವರ್ ಲಾಲನಿಗೆ ಮದುವೆ ಮಾಡಿದ್ದು ಕೂಡ ಶುಕ್ರವಾರದಂದೇ. ಈಗಲೂ ಮನೆ ಮತ್ತು ಎಲ್ಲಾ ಆಫೀಸು, ಫ್ಯಾಕ್ಟರಿಗಳಲ್ಲಿ ವೈಭವದಿಂದ ಪ್ರತಿ ಶುಕ್ರವಾರವೂ ಗಣೇಶ ಮತ್ತು ಲಕ್ಷ್ಮಿ ಪೂಜೆಯನ್ನು ಮಾಡುವ ಪರಿಪಾಟವನ್ನು ಗುನ್ನಾಲಾಲ್ ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾನೆ. ಅದಕ್ಕಾಗಿ ಒಳ್ಳೆಯ ಫಂಡನ್ನೇ ಎತ್ತಿಟ್ಟಿದ್ದಾನೆ. ಇಂಥ ಪೂಜೆ ಪುನಸ್ಕಾರಗಳೇ ಗುನ್ನಾಲಾಲನ ನಿರಂತರ ಉನ್ನತಿಗೆ, ಅಭ್ಯುದಯಕ್ಕೆ ಕಾರಣವಾಗಿರುವುದೆಂದು ಗುನ್ನಾಲಾಲ್ ಕುಟುಂಬ ಮತ್ತು ಅವನ ಸುತ್ತಮುತ್ತಲಿನವರ ನಂಬಿಕೆ.

ಶುಕ್ರವಾರ ಬಂದೇ ಬಿಟ್ಟಿತ್ತು. ಸಂದೀಪ್ ಕೊಚಾರ್ ಗುನ್ನಾಲಾಲನ ಭೇಟಿಗೆ ಸಮಯ ಕೊಟ್ಟಿದ್ದಿದ್ದು ಬೆಳಿಗ್ಗೆ ಹನ್ನೊಂದು ಗಂಟೆಗೆ. ಅದು ತುಂಬಾ ಪ್ರಶಸ್ತವಾದ ಸಮಯವೆಂದು ಒಂದು ಗಂಟೆ ಅವಧಿಯನ್ನು ಖುದ್ದು ಹರ್ಷವರ್ಧನ್ ಶಿರೋಡ್ಕರನೇ ಹೋಗಿ ನಿಗದಿಪಡಿಸಿಕೊಂಡು ಬಂದಿದ್ದ. ಬೆಳಿಗ್ಗೆ ಸರಿಯಾಗಿ ಹನ್ನೊಂದು ಗಂಟೆಗೆ ಶಿರೋಡ್ಕರ್ ಜೊತೆ ಗುನ್ನಾಲಾಲ್ ಪಶ್ಚಿಮ ಅಂಧೇರಿಯ ಜೆ.ಪಿ. ರಸ್ತೆಯ ಸಂದೀಪ್ ಕೊಚಾರನ ಮನೆ ಕಮ್ ಆಫೀಸು ತಲುಪಿದಾಗ ಇವರಿಗಾಗಿ ಕಾಯುತ್ತಿರುವಂತೆ ಕೊಚಾರನ ಸ್ಪುರದ್ರೂಪಿ ರಿಸೆಪ್ಷನಿಸ್ಟ್ ಅತ್ಯಂತ ಪರಿಚಿತಳಂತೆ 'ಬನ್ನಿ ಬನ್ನಿ ಗುನ್ನಾಲಾಲ್ ಜಿ, ಸರ್ ನಿಮಗಾಗಿ ಎದುರು ನೋಡುತ್ತಿದ್ದಾರೆ. ನಿಮ್ಮ ಭೇಟಿಯನ್ನು ಮುಗಿಸಿಕೊಂಡು ಹನ್ನೆರಡೂವರೆ ಗಂಟೆಗೆ ಅವರು ಏರ್‌ಪೋರ್ಟಿಗೆ ಹೊರಡಬೇಕಾಗಿದೆ. ಮೂರೂವರೆ ಫ್ಲೈಟಿಗೆ ದೆಹಲಿಗೆ ಹೊರಟಿದ್ದಾರೆ' ಎಂದು ಇಂಟರ್ ಕಾಮ್‌ನಲ್ಲಿ ಗುನ್ನಾಲಾಲ್ ಬಂದಿರುವ ವಿಷಯವನ್ನು ತನ್ನ ಬಾಸ್‌ಗೆ ತಿಳಿಸಿದ್ದಳು. ಇಂಟರ್ ಕಾಮ್ ಇಟ್ಟು ಒಳ ಹೋಗಲು ಗುನ್ನಾಲಾಲನಿಗೆ ಚೆಂಬರ್ ಬಾಗಿಲನ್ನು ತೆರೆದಿದ್ದಳು. ಹರ್ಷವರ್ಧನ್ ಶಿರೋಡ್ಕರ್ ಗುನ್ನಾಲಾಲನನ್ನು ಒಳಕ್ಕೆ ಕಳಿಸಿ ತಾನು ರಿಸೆಪ್ಷನಿಸ್ಟ್ ಮುಂದಿನ ಸೋಫಾದಲ್ಲಿ ಕುಳಿತ. ಒಳಗೆ ಹೋಗುತ್ತಿದ್ದಂತೆ ಗುನ್ನಾಲಾಲನಲ್ಲಿ ಯಾವುದೋ ಅಗೋಚರ ಶಕ್ತಿಗೆ ಪರವಶನಾದಂಥ ಅನುಭೂತಿ ಮೂಡಿತ್ತು. ಬಿಳಿ ಶರಟು, ಪಾಯಿಜಾಮದಲ್ಲಿದ್ದ ಸಂದೀಪ್ ಕೊಚಾರ್ ಮೈಯೆಲ್ಲಾ ಪ್ರಶಾಂತತೆ ಮತ್ತು ನಗುವನ್ನು ಆವಾಹಿಸಿಕೊಂಡವನಂತೆ ಕಾಣುತ್ತಿದ್ದ. ತನಗೆ ಅರಿವಿಲ್ಲದೆ ಎರಡೂ ಕೈಗಳನ್ನು ಜೋಡಿಸಿ ಕೈ ಮುಗಿದಿದ್ದ ಗುನ್ನಾಲಾಲ್.

'ಕುಳಿತುಕೊಳ್ಳಿ ಗುನ್ನಾಲಾಲ್ ಜಿ, ನಿಮ್ಮ ಕುಟುಂಬದ ಭವಿಷ್ಯ ಅತ್ಯಂತ ಸಂಪನ್ನವಾದದ್ದಾಗಿದೆ. ನಿಮಗೆ ಒದಗಿರುವ ಅದೃಷ್ಟ ಜಗತ್ತಿನಲ್ಲಿ ಐದಾರು ಲಕ್ಷಕ್ಕೆ ಒಬ್ಬರಿಗೆ ಮಾತ್ರ ಒಲಿಯುವಂತಹ ಅದೃಷ್ಟವಾಗಿದೆ. ಇನ್ನು ನಿಮ್ಮ ಮೊಮ್ಮಗನ ಭವಿಷ್ಯ ಕೂಡ ಪ್ರಚ್ಛನ್ನತೆಯನ್ನು ಹೊಂದಿದೆಯೆಂದೇ ಹೇಳಬೇಕು...' ಸಂದೀಪ್ ಕೊಚಾರ್ ಮಾತು ನಿಲ್ಲಿಸಿ ಗುನ್ನಾಲಾಲನ ಕಣ್ಣುಗಳನ್ನು ಭೇದಿಸುವವನಂತೆ ನೋಡಿದ್ದ. 'ಆದರೂ ಏಕೋ ಒಮ್ಮೊಮ್ಮೆ ಭಯ' ಅರಿವಿಲ್ಲದೆಯೇ ಗುನ್ನಾಲಾಲನ ಬಾಯಿಂದ ಮಾತುಗಳು ಹೊರಬಿದ್ದಿದ್ದವು.

'ಅಂ! ಜೀವ ಜಗತ್ತಿನ ಪ್ರತಿಯೊಂದು ಪ್ರಾಣಿಯಲ್ಲೂ ಹಸಿವು, ಕಾಮದಂತೆ ಭಯವೆಂಬ ನೈಸರ್ಗಿಕ ಪ್ರವೃತ್ತಿ ಅಂತರ್ಗತವಾಗಿರುತ್ತದೆ. ಮನುಷ್ಯನಲ್ಲಿ ಈ ಪ್ರವೃತ್ತಿ ಹೆಚ್ಚಾಗಿರುವುದು ಸಾರ್ವತ್ರಿಕವಾಗಿ ಪ್ರಕಟಗೊಂಡ ಸಂಗತಿಯೇ ಆಗಿದೆ.